ರಂಗಾಗಿದ್ದರು. ಕರೆಯಲು ಬಂದವರಿಗೆ, 'ನಾವು ಕೂಲಿ ಕೆಲಸ ಮಾಡುವುದನ್ನು ಬಿಟ್ಟು ಬಿಟ್ಟಿದ್ದೇವೆ; ನಮಗೇ ಕೂಲಿಕಾರರು ಬೇಕಾಗಿದ್ದಾರೆ' ಎಂದರು. ಕೇಳಿದಷ್ಟು ಹಣ ಕೊಡುತ್ತೇವೆ ಎಂದರೂ ಯಾರೂ ಬರಲಿಲ್ಲ.

ಧಣಿಗಳು ರಾಜನಿಗೆ ದೂರು ಕೊಟ್ಟರು. ರಾಜ ಕೂಲಿಕಾರರನ್ನು ಕರೆಯಲು ಸೇವಕನನ್ನು ಕಳುಹಿಸಿದ. ಆದರೂ ಅವರು ಬರಲೇ ಇಲ್ಲ! ಎಲ್ಲ ಪ್ರಜೆಗಳೂ ಸುಖವಾಗಿರಬೇಕೆಂದು ತಾನು ಮಾಡಿದ ಪ್ರಯತ್ನ ಹೀಗಾಯಿತಲ್ಲ ಎಂದು ರಾಜನಿಗೆ ಮತ್ತೆ ಚಿಂತೆಯಾಯಿತು.

ರಾಜನ ಅತಿಯಾದ ಔದಾರ್ಯ, ಅಸಾಧ್ಯವಾದ ಆಕಾಂಕ್ಷೆಯಿಂದ ಮಂತ್ರಿಗೂ ಬೇಸರವಾಯಿತು. ಆದರೂ ಸಮಸ್ಯೆಯನ್ನು ಬಗೆಹರಿಸಬೇಕಲ್ಲ ಎಂದುಕೊಂಡು ತಾನೇ ಮುಂದಾಗಿ, ಸಿರಿವಂತರಿಗೆ ಛೀಮಾರಿ ಹಾಕಿದ. 'ನೀವು ಕೂಲಿಕಾರರನ್ನು ಮನಬಂದಂತೆ ದುಡಿಸಿಕೊಂಡು ಸರಿಯಾಗಿ ಹಣ ಕೊಡದೆ ಪೀಡಿಸಿದ್ದೀರಿ. ಅನ್ಯಾಯದಿಂದ ಹಣ ಗಳಿಸಿದ್ದೀರಿ. ರಾಜರಿಗೇ ಮೋಸ ಮಾಡಿದ್ದೀರಿ. ಆ ಪಾಪವೇ ನಿಮ್ಮನ್ನು ಸುತ್ತಿಕೊಂಡಿದೆ. ದೇವರ ಕೃಪೆಯಿಂದ ಈಗ ಅವರೆಲ್ಲ ಸಿರಿವಂತರಾಗಿದ್ದಾರೆ. ಮಹಾರಾಜರ ಮಾತನ್ನೂ ಕೇಳದಷ್ಟು ಕೊಬ್ಬಿದ್ದಾರೆ. ಈಗ ನಿಮಗುಳಿದಿರುವುದು ಒಂದೇ ದಾರಿ: ಹೋಗಿ ಪಶ್ಚಾತ್ತಾಪದಿಂದ ಅವರಲ್ಲಿ ಕ್ಷಮೆ ಕೇಳಿರಿ. ಮುಂದೆ ಅವರಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಿರಿ. ರಾಜನ ಖಜಾನೆಗೆ ಕರ–ಕಂದಾಯ ತುಂಬಿರಿ' ಎಂದು ಸಲಹೆ ಹೇಳಿ ಕಳುಹಿಸಿದನು. ಹಾಗೆಯೇ ಲಂಚಕೋರ ಅಧಿಕಾರಿಗಳನ್ನು ಪತ್ತೆ ಹಚ್ಚಿ ಅವರಿಗೆ ಸರಿಯಾದ ಶಿಕ್ಷೆ ವಿಧಿಸಬೇಕೆಂದು ಆಜ್ಞೆ ಮಾಡಿದನು.

ಸರ್ವಾಂತರ್ಯಾಮಿಯಾದ ಪರಮಾತ್ಮನಿಗೆ ತನ್ನ ನಿಜಭಕ್ತನ ಪರಿಸ್ಥಿತಿಯನ್ನು ನೋಡಲಾಗಲಿಲ್ಲ. ತಾನು ಬಡಬಗ್ಗರಿಗೆ ಕೊಟ್ಟಿದ್ದ ಸಕಲ ಐಶ್ವರ್ಯಗಳನ್ನೂ ಸೆಳೆದುಕೊಂಡುಬಿಟ್ಟ. ದಿಢೀರನೆ ಸಿರಿವಂತರಾದವರು ದಿಢೀರನೆ ಮೊದಲಿನ ಸ್ಥಿತಿಗೆ ಬಂದರು. ಅವರಿಗೆ ತಮ್ಮ ತಪ್ಪಿನ ಅರಿವಾಯಿತು. ಅವರನ್ನು ಪೀಡಿಸುತ್ತಿದ್ದ ಸಿರಿವಂತರೂ ಬುದ್ಧಿವಂತರಾದರು; ಸಜ್ಜನರಾದರು; ದೀನ–ದುಃಖಿತರ ಹಿತೈಷಿಗಳಾದರು.

ರಾಜ ಸಮಾಧಾನದ ಉಸಿರು ಬಿಟ್ಟ. ರಾಜನಿಗೆ ದೇವರ ಮೇಲಿದ್ದ ಭಕ್ತಿ–ವಿಶ್ವಾಸ ಇನ್ನೂ ಗಟ್ಟಿಯಾಯಿತು. ಸಮಾಜದಲ್ಲಿ ಎಲ್ಲರೂ ಸಮಾನ ಸುಖಿಗಳಾಗಿರುವುದು ಸಾಧ್ಯವೇ ಇಲ್ಲ ಎಂಬ ಸತ್ಯದ ಅರಿವಾಯಿತು.

**-ಶ್ರೀಶೈಲ ಪ. ಕಳಸದ, ಹಿರೇಬಾಗೇವಾಡಿ**

---

# ಹಣ್ಣಿನ ಸಿಪ್ಪೆ

ಹಣ್ಣಿನ ಸಿಪ್ಪೆ ಸಪ್ಪೆಯಲ್ಲ
ತಿಪ್ಪೆಗೆ ಎಸೆವುದು ತಪ್ಪು
ಸಿಪ್ಪೆಯಲಡಗಿದ ಸತ್ವ ಒಪ್ಪು
ಕಸದಲಿ ರಸವಿದೆ ಪಾಪು

ದ್ರಾಕ್ಷಿ ಮೇಲಿನ ಸಿಪ್ಪೆ ಸುಲಿದು
ತಿರುಳು ತಿನ್ನುವುದು ಸಾಕು
ಸಿಪ್ಪೆಯಲಡಗಿದೆ ನಾರಿನ ಅಂಶ
ಉತ್ಸಾಹಕೆ ತಿನ್ನಲೇ ಬೇಕು

ಹಲ್ಲಲಿ ಗೀರಿ ರಸವನು ಹೀರಿದ
ಮಾವಿನ ಸಿಪ್ಪೆ ಎಸೆಯಲುಬೇಡಿ
ಸಿಪ್ಪೆ ತಿಂದರೆ ತೂಕ ಇಳಿವುದು
ಕೊಬ್ಬು ಆಗುವುದು ಮಂಗಮಾಯ

ತಿಂದರೆ ಸೇಬು ದಿನಕೆ ಒಂದು
ಬಾರದು ರೋಗ ಮುಂದೆಂದು
ಸಿಪ್ಪೆಯಲಡಗಿದೆ ಆರೋಗ್ಯದ ಗುಟ್ಟು
ಕಬ್ಬಿಣ ಅಂಶ ದುಪ್ಪಟ್ಟು

ಕಿವಿ ಹಣ್ಣು ಕರ ಕರ ತಿನ್ನು
ಡೆಂಗ್ಯು ಜ್ವರಕೆ ಇದು ಮದ್ದು
ಸಿಪ್ಪೆಯಲಡಗಿದೆ ನಿರೋಧಕ ಶಕ್ತಿ
ಸೌಖ್ಯವೆ ಸುಖದ ಒಳಗುಟ್ಟು

ಮಕ್ಕಳು ಬೆಳೆದರೆ ಸಂಪತ್ತು
ತಿನ್ನಿರಿ ಹಣ್ಣು ಮೂರೂ ಹೊತ್ತು
ಸಿಪ್ಪೆಯಲಡಗಿದೆ ರಸದ ಸಾರ
ಬಾರದು ರೋಗ ಯಾವತ್ತು.

**-ಲಲಿತಾ ಕೆ. ಹೊಸಪ್ಯಾಟಿ**



## ನಿಮಗೆಷ್ಟು ಗೊತ್ತು

## ಟೈಟಾನ್ ಪುಷ್ಪ



ಉತ್ತರ ಬ್ರಸೆಲ್ಸ್‌ಗೆ ಸೇರಿದ ಮೈಸ್ ರಾಷ್ಟ್ರೀಯ ಬೊಟಾನಿಕಲ್ ಗಾರ್ಡನ್‌ನಲ್ಲಿ ಪ್ರಪಂಚದ ಅತ್ಯಂತ ದೊಡ್ಡ ಗಾತ್ರದ ಪುಷ್ಪ ಅರಳಿದೆ. ಮೂರು ವರ್ಷಗಳಿಗೊಮ್ಮೆ ಅರಳಿ, 72 ಗಂಟೆಗಳ ಕಾಲ ಉಳಿಯುವ ಈ ಹೂವಿನ ಹೆಸರು 'ಟೈಟಾನ್ ಅರಮ್'. ಇದರ ವೈಜ್ಞಾನಿಕ ಹೆಸರು ಎಮಾರ್ಫುಲಸ್ ಟೈಟಾನಮ್.

ಈ ಬೃಹತ್ ಹೂವು ತಳ ಭಾಗದಲ್ಲಿ ಹಸಿರು ಮತ್ತು ತುದಿಯಲ್ಲಿ ಗಾಢ ಕೆಂಪು ಬಣ್ಣದಿಂದ ಕಂಗೊಳಿಸುತ್ತದೆ. ಕ್ರಿಮಿ –ಕೀಟಗಳನ್ನು ತನ್ನತ್ತ ಸೆಳೆಯುವ ಸಲುವಾಗಿ ಈ ಹೂವು ಕೊಳೆತ ಹೆಣದ ವಾಸನೆ ಬೀರುತ್ತದಂತೆ. ಈ ದೈತ್ಯ ಹೂವನ್ನು ನೋಡಲು ಜನ ಮುಗಿಬೀಳುತ್ತಾರಂತೆ. ಈ ಹೂವು ಅರಳುವ ಸಮಯದಲ್ಲಿ ಬೊಟಾನಿಕಲ್ ಗಾರ್ಡನ್‌ನವರು ರಾತ್ರಿ ಹತ್ತರವರೆಗೆ ಪ್ರವೇಶಕ್ಕೆ ಅನುಮತಿ ನೀಡಿದ್ದಾರೆ.

ಇಂಡೋನೇಷ್ಯಾದ ಮಳೆಕಾಡಾದ ದಕ್ಷಿಣ ಸುಮಾತ್ರಾದಲ್ಲಿ ಮಾತ್ರ ನೈಸರ್ಗಿಕವಾಗಿ ಬೆಳೆಯುವ ಈ ಸಸ್ಯವನ್ನು ಕಾಣಬಹುದು. ಆದರೆ ಪ್ರಪಂಚದಾದ್ಯಂತ ಬೊಟಾನಿಕಲ್ ಗಾರ್ಡನ್‌ಗಳಲ್ಲಿ ಈ ಸಸ್ಯವನ್ನು ಬೆಳೆಸಲಾಗುತ್ತಿದೆ. ಈ ಹೂವಿನ ಉದ್ದ ಸುಮಾರು ಮೂರು ಮೀಟರ್. ಮೊದಲ ಬಾರಿ ಈ ಸಸ್ಯ ಹೂವು ಬಿಡಬೇಕಾದರೆ 7– 10 ವರ್ಷ ಬೇಕಾಗುತ್ತದೆ. ನಂತರ ಮೂರು ವರ್ಷಕ್ಕೊಮ್ಮೆ ಹೂವು ಬಿಡುತ್ತದೆ. ಕೆಲವೊಮ್ಮೆ ಏಳು ವರ್ಷಗಳಿಗೊಮ್ಮೆ ಹೂವು ಬಿಡುವುದೂ ಉಂಟು

**- ನಿಸರ್ಗ**